ಸೃಜನಿ

**SRUJANI: Indian Journal of Innovative Research and Development (SIJIRD)**
Volume-5 Issue- 4, September - October 2026, Pp. 71-74
Bi-Monthly, Peer-Reviewed, Open Access, Indexed Journal

**I S S N: 2583-3510**
**SIRDF JOURNALS**
editor@srujani.in
www.srujani.in

# ‘ಪಾಪಪ್ರಜ್ಞೆ’ಯ ರೂಪ ಆನಂದರ ‘ನಾನು ಕೊಂದ ಹುಡುಗಿ’

**ಮಹೇಶ್ ಯು. ಸಿ**
ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಡೂರು
ಚಿಕ್ಕಮಗಳೂರು ಜಿಲ್ಲೆ

***Abstract:***
*‘ಆನಂದ’ ಎಂಬ ಕಾವ್ಯನಾಮದಿಂದ ಸಣ್ಣಕಥೆಗಳ ಇತಿಹಾಸದಲ್ಲಿ ಬಹುದೊಡ್ಡ ಚಿರಪರಿಚಿತ ಹೆಸರುಗಳಲ್ಲೊಂದು ಅಜ್ಜಂಪುರ ಸೀತಾರಾಮ ಅವರದು. ಕನ್ನಡ ಸಾಹಿತ್ಯದ ಅತ್ಯುತ್ತಮ ಕಥೆಗಳಲ್ಲಿ ಒಂದಾದ ‘ಮಾಟಗಾತಿ’ ಎಂಬ ಕಥಾಸಂಕಲದ ‘ನಾನು ಕೊಂದ ಹುಡುಗಿ’ ಪ್ರಮುಖವಾದುದು. ಸಣ್ಣ ಕಥೆಗಳು ಕನ್ನಡ ಸಾಹಿತ್ಯದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿದ್ದ ಕಾಲದಲ್ಲಿ ರಚಿತವಾದ ಈ ಕಥೆ ವೈಶಿಷ್ಟಪೂರ್ಣವಾಗಿದೆ. ಈ ಕಥೆಯ ನಿರೂಪಣೆಯ ವಿಧಾನವೇ ಓದುಗರನ್ನು ಓದಿಸಿಕೊಂಡು ಹೋಗುವ ವಿಶಿಷ್ಠ ತಂತ್ರದಲ್ಲಿದೆ. ನಿರೂಪಕರು ತಮ್ಮ ಅನುಭವವನ್ನು ಸಾಹಿತ್ಯ ಲೋಕದಲ್ಲಿ ಅನಾವರಣಗೊಳಿಸುವ ವಿಧಾನವೇ ಒಂದು ಆಕರ್ಷಣೀಯವಾದುದು. ಕತೆಯಲ್ಲಿ ನಾನು ಒಬ್ಬ ಪಾತ್ರಧಾರಿ, ಆದ್ದರಿಂದ ನನ್ನ ಪಾತ್ರವೂ ಪ್ರಮುಖವೆಂದು ತೋರಿಸುವ ಪ್ರಯತ್ನವಂತೂ ಅಲ್ಲವೇ ಅಲ್ಲ. ಇಂದಿಗೂ ಸಮಾಜದಲ್ಲಿ ಒಂದು ಸಮಸ್ಯೆಯಾಗಿ ಕಾಡುತ್ತಿರುವ ಸಾಮಾಜಿಕ ಸಮಸ್ಯೆ ದೇವದಾಸಿ ಪದ್ಧತಿ. ಲೇಖಕರು ಹೋರಾಟದ ಮೂಲಕ ಈ ಸಮಸ್ಯೆಯನ್ನು ಹೋಗಲಾಡಿಸುವ ಬದಲು ಮನಪರಿವರ್ತಿಸುವ ಮೂಲಕ ಮಾಡಬಹುದೆಂದು ಮಾಡಿದ ಪ್ರಯತ್ನ ಇಲ್ಲಿ ಕಥೆಯ ನಾಯಕಿಯನ್ನು ಹಾಗೂ ನಿರೂಪಕರನ್ನು ಪಾಪಪ್ರಜ್ಞೆಯಾಗಿ ಕಾಡಿದೆ.*

***Keywords:*** *ಕನ್ನಡ ಸಾಹಿತ್ಯ, ಅಜ್ಜಂಪುರ ಸೀತಾರಾಮ, ಆನಂದ, ನಾನು ಕೊಂದ ಹುಡುಗಿ.*

## ಪೀಠಿಕೆ

ನಾನು ಕೊಂದ ಹುಡುಗಿ ಕಥೆಯ ನಾಯಕಿ ಚೆನ್ನಿ. ಕಥೆಯ ಪಾತ್ರಧಾರಿಯೂ ನಿರೂಪಕರೂ ಮತ್ತು ಲೇಖಕರೂ ಆಗಿರುವ ಆನಂದ ಅವರಿಬ್ಬರನ್ನೂ ಕಾಡುವ ಪಾಪಪ್ರಜ್ಞೆಯ ತಿರುಳನ್ನು ಹೊಂದಿರುವ ಈ ಕಥೆಯಲ್ಲಿ ಪಾತ್ರಧಾರಿ ನಾಯಕಿ ಮತ್ತು ನಿರೂಪಕರಿಬ್ಬರೂ ಒಂದೇ ಘಟನೆಯಿಂದ ಈ ಘಟನೆಗೆ ನಾವೇ ಕಾರಣವೆಂದು ತೆಗೆದುಕೊಳ್ಳುವ ನಿರ್ಧಾರಗಳು ಬೇರೆ ಬೇರೆಯಾಗಿ ಕಾಡಿದೆ. ಸಮಾಜದಲ್ಲಿನ ಅನಿಷ್ಟ ಆಚರಣೆಯಾದ ದೇವದಾಸಿ ಪದ್ಧತಿಗೆ ಸಿಲುಕಿರುವ ಚೆನ್ನಿ ತಾನು ಮಾಡುತ್ತಿರುವ ಕಾರ್ಯ ಅಸಹ್ಯವಾದುದೆಂದು ನಿರೂಪಕರ ಮೂಲಕ ತಿಳಿದು, ಈ ಕಾರ್ಯವನ್ನು ಮಾಡುವ ಬದಲು ಈ ಸಮಾಜದಲ್ಲಿ ನನ್ನಂತಹವರು ಇರಬಾರದೆಂದು ತಿಳಿದು ಪಾಪಪ್ರಜ್ಞೆಯಿಂದ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡರೆ, ಈ ಪದ್ಧತಿಯ ಬಗ್ಗೆ ಏನೂ ಅರಿಯದೆ ಮನೆಯವರ ನಂಬಿಕೆಗೆ ಬಿದ್ದು ಅಸಹ್ಯ ಬದುಕನ್ನು ತಿದ್ದಲು ಹೋಗಿ ಆಕೆ ಬಾವಿಗೆ ಹಾರಿ ಪ್ರಾಣ ಕಳೆದುಕೊಳ್ಳುವ ಮುಗ್ಧೆ ಚೆನ್ನಿಯ ಸಾವಿಗೆ

***Please cite this article as:*** ಮಹೇಶ್, ಯು.ಸಿ. (2026). ‘ಪಾಪಪ್ರಜ್ಞೆ’ಯ ರೂಪ ಆನಂದರ ‘ನಾನು ಕೊಂದ ಹುಡುಗಿ’. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(4), 71–74

ನಾನೇ ಕಾರಣವೆಂದು ಕಾಡುವ ಪಾಪಪ್ರಜ್ಞೆ ನಿರೂಪಕರದ್ದು. ಹಾಗಾಗಿ ಈ ಪಾಪಪ್ರಜ್ಞೆಯಲ್ಲಿ ತೊಳಲುವ ಎರಡೂ ಪಾತ್ರಧಾರಿಗಳ ಕಥೆಯನ್ನು ಲೇಖಕರು ನಿರೂಪಿಸಿರುವ ವಿಧಾನವೇ ಅದ್ಭುತವಾದುದು ಮತ್ತು ವಿಶಿಷ್ಟವಾದುದು. ಲೇಖಕರ ಆತ್ಮಾವಲೋಕನ ಇಲ್ಲಿ ಪ್ರಮುಖವಾಗುತ್ತದೆ. ಈ ಕಥೆಯೇ ಒಂದು ಆತ್ಮಾವಲೋಕನದ ಕಥೆಯಾಗಿದೆ.

ನಿರೂಪಕರೇ ಹೇಳಿಕೊಂಡಂತೆ ಮೌಢ್ಯವೆಂದು ತಿಳಿಯದೆ ದೇವರಿಗೆ ತನ್ನ ದೇಹವನ್ನು ಅರ್ಪಿಸಲೆಂದೇ, ಅರ್ಪಿಸುವುದಕೋಸ್ಕರವಾಗಿಯೇ ನಾನು ಹುಟ್ಟಿದ್ದೇನೆಂದು ತಿಳಿದುಕೊಂಡಿದ್ದ ನಂಬಿಕೆಯ ಆ ಹುಡುಗಿಗೆ ನಾನು ಏಕೆ ತಿಳಿ ಹೇಳಿದೆ? ನನಗೆ ಇದ್ದ ಹಕ್ಕಾದರೂ ಏನು? ನಾನು ಹೇಳುವ ವಿಚಾರವನ್ನು ಆಕೆ ಹೇಗೆ ಅರ್ಥೈಸಿಕೊಳ್ಳ ಬಲ್ಲಳು? ಎಂಬ ಆಲೋಚನೆ ನನಗೆ ತಿಳಿ ಹೇಳುವ ಮೊದಲು ಏಕೆ ತಿಳಿಯಲಿಲ್ಲ ಎನ್ನುವುದು. ಏಕೆಂದರೆ ನಿರೂಪಕರಿಗೆ ಇದು ಮೌಢ್ಯವಾಗಿ ಕಂಡರೆ ಚೆನ್ನಿಗೆ ಅದು ನಂಬಿಕೆಯಾಗಿತ್ತು. ಆಕೆಯ ಮನದಲ್ಲಿ ನಾನು ಮಾಡುತ್ತಿರುವ ಕಾರ್ಯ ಹೀನ ಎಂದು ಅನ್ನಿಸಿಯೇ ಇರಲಿಲ್ಲ. ನಿರೂಪಕರು ತಿಳಿಹೇಳಿದ ಮೇಲೆಯೆ ಆಕೆಗೆ ಅರಿವಾಗಿರುವುದು.

ಚೆನ್ನಿಯ ಬದುಕಿನ ವೃತ್ತಾಂತವನ್ನು ತಿಳಿದುಕೊಂಡ ನಿರೂಪಕರಿಗೆ ಈಕೆ ಚಿಕ್ಕ ಮಗುವಾಗಿದ್ದಾಗಲೇ ಯಾವುದೋ ಕಾಯಿಲೆಯಿಂದ ನರಳುತ್ತಿದ್ದಾಗ ಈಕೆ ಬದುಕಬೇಕಾದರೆ ಮರಡಿ ಬೆಟ್ಟಕ್ಕೆ ಹರಕೆ ಬಿಡಬೇಕಾಗಿತ್ತು ಹಾಗೆ ಬೆಟ್ಟದ ದೇವರಿಗೆ ಬಸವಿಯ ಹರಕೆ ಬಿಟ್ಟಿದ್ದರಿಂದ ಬದುಕಿದಳು. ಆದರೆ ಬದುಕಿದ್ದು ಸತ್ತಂತೆ. ಆಗ ಸತ್ತಿದ್ದರೆ ಒಂದೇ ಬಾರಿ ಜೀವ ಹೋಗುತ್ತಿತ್ತು, ಈಗ ಜೀವಂತವಾಗಿ ಬದುಕಿನ್ನುದ್ದಕ್ಕು ಸಾಯುವ ರೀತಿಯ ಬಗ್ಗೆ ನಿರೂಪಕರಿಗೆ ಅಯ್ಯೋ ಅನ್ನಿಸಿದೆ. ಹಾಗಾಗಿಯೇ ಅವರಿಗೆ ತಿದ್ದಬೇಕು ಅನ್ನಿಸಿರುವುದು. ನನಗೆ ಹೀಗೆ ಅನ್ನಿಸಿದ್ದೆ ಅವಳ ಸಾವಿಗೆ ಕಾರಣವಾಗಿದೆ ಎನ್ನುವುದು ನಿರೂಪಕರ ವಾದ. ನಿರೂಪಕರು ನಾಗರಿಕ ಜಗತ್ತಿನ ಬಗ್ಗೆ ಆಲೋಚಿದರೆ ಚೆನ್ನಿ ಮತ್ತು ಆಕೆಯ ಕುಟುಂಬಕ್ಕೆ ಧರ್ಮದ ಬಲೆಯಿತ್ತು. ತಮ್ಮ ಧರ್ಮ ಏನು ಹೇಳುತ್ತದೆಯೋ ಅದರಂತೆ ನಡೆಯುವ ಮನಸ್ಥಿತಿ. ನಾಗರಿಕತೆ ಮತ್ತು ಧರ್ಮಗಳ ತೊಯ್ದಾಟದಲ್ಲಿ ನಾಗರಿಕತೆಯೂ ಸೋತಿತು ಧರ್ಮವೂ ಸೋತಿದ್ದನ್ನು ಕಾಣಬಹುದು. ನಿರೂಪಕರ ಹಿತನುಡಿಗಳನ್ನು ಕೇಳಿಯೂ ಚೆನ್ನಿ ಅದೇ ಕಾಯಕ ಮಾಡಿಕೊಂಡು ಬದುಕಿದ್ದರೆ ಧರ್ಮವೇ ಮೇಲುಗೈ ಸಾಧಿಸುತ್ತಿತ್ತು.

ಚೆನ್ನಿಯ ತಂದೆಗೆ ಮಗು ಬದುಕಬೇಕಿತ್ತೇ ವಿನಾಃ ಹೇಗೆ ಬದುಕಬೇಕೆಂಬ ಅರಿವಿದ್ದಂತೆ ಕಾಣುವುದಿಲ್ಲ. ದೇವರ ಹೆಸರಿನಲ್ಲಿ ಬಸವಿ ಬಿಟ್ಟಾಗ ಆ ದೇವರಿಂದಲೇ ಮಗು ಬದುಕಿತು ಎಂದು ತಿಳಿದಿದ್ದ ತಂದೆಗೆ ತನ್ನ ಮಗಳು ಜೀವನದುದ್ದಕ್ಕೂ ಸಾಯುತ್ತಾಳೆಂಬ ಕಲ್ಪನೆಯು ಬಂದಂತಿಲ್ಲ. ಆದರೆ ದೇವದಾಸಿ ಪದ್ಧತಿಯಲ್ಲಿ ಬಸವಿ ಬಿಟ್ಟವರು ಬಯಸಿ ಬಂದ ಪುರುಷರ ಬಯಕೆ ತೀರಿಸುವುದಾಗಿದ್ದರೆ, ಚೆನ್ನಿಯ ಕಾಯಕ ಆ ರೂಪದ ಅರ್ಪಣೆಯಾಗಿಲ್ಲ. ಅವರ ಮನೆಗೆ ಬಂದ ಕುಲೀನರ ಸೇವೆ ಮಾತ್ರ. ಸಾಮಾನ್ಯ ಜನರ ಸೇವೆಯಾಗಿರಲಿಲ್ಲ. ಚೆನ್ನಿ ಮಾಡುವ ಕಾಯಕ ಕಂಡ ನಿರೂಪಕರು "ಇದು ಸೂಳೆಯರು ಮಾಡುವ ಕಾಯಕವೆಂದಾಗ" ಚೆನ್ನಿಗೆ ಎಲ್ಲಿಲ್ಲದ ಕೋಪ. "ನನ್ನನ್ನು ಅವರಿಗೆ ಹೋಲಿಸಬೇಡಿ" ಎಂದು ತಕ್ಷಣವೇ ಪ್ರತಿಕ್ರಿಯಿಸುವ ವಿಧಾನ ನೋಡಿದರೆ ತನಗೂ ಸೂಳೆಯರಿಗೂ ಇರುವ ವ್ಯತ್ಯಾಸ ಸ್ಪಷ್ಟವಾಗಿ ತಿಳಿದಿದ್ದಾಳೆ. ಆಕೆಯ ಪ್ರತಿಕ್ರಿಯೆಯಲ್ಲಿ "ನಾವು ಅವರಂತೆ ಸೂಳೆಯರಲ್ಲ, ಅವರು ಫಲಕ್ಕೆ ಪ್ರತಿಫಲವಾಗಿ ಹಣವನ್ನು ಪಡೆಯುತ್ತಾರೆ. ಆದರೆ ನಾನು ಹಣವನ್ನು ಪಡೆಯುವುದಿಲ್ಲ, ನಿಮ್ಮಂತಹ ಜಾತಿ ಶ್ರೇಷ್ಠರ ಸೇವೆಯೇ ದೇವರ ಸೇವೆ ಅದೇ ನಮ್ಮ ಹರಕೆ. ನಿಮ್ಮ ಸೇವೆ ಮಾಡುವುದೇ ನಮ್ಮ ಜೀವನದ ಪುಣ್ಯದ ಕೆಲಸ" ಎನ್ನುವಾಕೆಗೆ ನಿರೂಪಕರ ಪರಿವರ್ತನೆಯ

ಮಾತುಗಳು ಮುಂದೆ ಪಾಪಪ್ರಜ್ಞೆಯ ಅರಿವು ಮೂಡಿಸುವುದು ಒಂದು ಸೋಜಿಗವೇ ಸರಿ.

ನಿರೂಪಕರೇ ತಿಳಿಸಿದಂತೆ ಆಕೆಯ ಹಾವಭಾವಗಳು, ನಡವಳಿಕೆಗಳು ಮೊದಮೊದಲು ಆಕೆಯ ಕ್ರಿಯೆಗೆ ತದ್ವಿರುದ್ದದಂತೆ ಕಂಡರೂ ರಾತ್ರಿಯಾದಂತೆ ಆಕೆ ನಡೆದುಕೊಂಡ ರೀತಿ ಮಾತ್ರ ಆಶ್ಚರ್ಯವಾಗಿತ್ತು. ಚೆನ್ನಿಯ ದೃಷ್ಟಿಯಲ್ಲಿ ಆಕೆಯ ಮನೆಗೆ ಬಂದ ನಿರೂಪಕರು ಕಾಮ ಬಯಕೆಯಿಂದಲೇ ಬಂದಿದ್ದಾರೆ, ಅವರೇ ನನ್ನ ಪಾಲಿನ ದೇವರು ನಾನೀಗ ಅವರ ಸೇವೆ ಮಾಡಬೇಕೆಂಬ ಅರಿವು ಸಹಜವಾದುದೇ ಆಗಿದೆ. ಏಕೆಂದರೆ ಆಕೆಯ ಮನದಲ್ಲಿ ಮನೆಯವರು ಮತ್ತು ಬಯಕೆಯ ಸಮಾಜಕಾರ್ಯದ ವಿಷ ಬೀಜವನ್ನು ಆಳವಾಗಿ ಬಿತ್ತಿರುವುದರಿಂದ ಅದರ ಫಲ ಈ ರೀತಿಯ ನೊಂದವರ ಪಾಲಾಗುತ್ತಿದೆ. ಇದು ಸಮಾಜ ಬಿತ್ತಿರುವ ವಿಷಬೀಜವೆಂದು ಅರಿಯದ ಮುಗ್ಧರು ತಮ್ಮ ಇಡೀ ಜೀವನವನ್ನೇ ಬಲಿ ಕೊಡುವ ಪರಿಯಾಗಿದೆ. ಅದರಲ್ಲೂ ಈ ಮೇಲ್ಜಾತಿಯ ಗಂಡು ಸಮಾಜ ಧರ್ಮದ ಹೆಸರಿನಲ್ಲಿ ಮಾಡಿಕೊಂಡಿರುವ ಹುನ್ನಾರವೆಂದು ಎಲ್ಲಿಯೂ ತಿಳಿದುಕೊಳ್ಳದಂತೆ ಮಾಡಿರುವ ಯೋಜನೆ ಅರಿವಿಗೆ ಬರದಂತೆ ಗೌಪ್ಯವಾಗಿ ಮುಚ್ಚಿಟ್ಟುಕೊಂಡು ಕಡ್ಡಾಯವಾಗಿ ನಡೆದುಕೊಂಡು ಬರುವಂತೆ ಮಾಡಿರುವ ಈ ಕ್ರೌರ್ಯ ಮಾತ್ರ ಬಯಲಿಗೆ ಬರದು. ಚೆನ್ನಿಯ ಸಾವಿಗೆ ಮಾತ್ರ ತಾನು ಮಾಡುತ್ತಿರುವ ಕಾರ್ಯ ಅಸಹ್ಯವೆಂದು ತಿಳಿಯದಂತೆ ಅಚ್ಚುಕಟ್ಟಾಗಿ ನಿರ್ವಹಿಸಿಕೊಂಡು ಬಂದಿರುವ ಯೋಜನೆಗೆ ಬಲವಾದ ಕೊಡಲಿ ಪೆಟ್ಟುಕೊಟ್ಟದ್ದು ಮಾತ್ರ ನಿರೂಪಕರ ಪರಿವರ್ತನೆಯ ಮಾತುಗಳೆಂಬುದು ಯಾರ ಗಮನಕ್ಕೂ ಬರಲೇ ಇಲ್ಲ.

ನಿರೂಪಕರು ಮತ್ತು ಚೆನ್ನಿಗೆ ಮಾತ್ರ ಈ ಕ್ರಿಯೆಯ ಹಿಂದಿನ ಘಟನೆಗಳ ಅರಿವಿತ್ತು. ಆದರೆ ಇದರ ಪರಿಣಾಮ ಸಾವು ಎಂಬುದು ಇಬ್ಬರ ಅರಿವಿಗೆ ಬಂದಂತೆ ಕಾಣುವುದಿಲ್ಲ. ನಾನು ಹೇಳುವ ಪರಿವರ್ತನೆಯ ಮಾತುಗಳಿಂದ ಆಕೆ ಬದಲಾಗಿ ಹೊಸ ಜೀವನ ಸಾಗಿಸ ಬಲ್ಲಳು ಎಂಬುದಷ್ಟೇ ಅವರ ಚಿಂತನೆಯಾಗಿತ್ತು. ಆದರೆ ಅದು ಹಾಗಾಗಲಿಲ್ಲ. ಚೆನ್ನಿಯು ಸಹ ನಿರೂಪಕರ ಮಾತುಗಳನ್ನು ಗಂಭೀರವಾಗಿ ತೆಗೆದುಕೊಂಡು ಆಕೆ ಮಾಡಿದ ನಿರ್ಧಾರವೇ ಬೇರೆಯಾಯಿತು. ಜೀವನ ವಿಧಾನ ಬದಲಾಗುತ್ತದೆ ಎಂದು ತಿಳಿದಿದ್ದ ನಿರೂಪಕರಿಗೆ ತಿಳಿದದ್ದೇ ಬೇರೆಯಾಯಿತು. ಜೀವನ ವಿಧಾನ ಬೇರೆಯಾಗಲಿಲ್ಲ ಜೀವವೇ ದೇಹದಿಂದ ಬೇರೆಯಾಯಿತು. ಅವರ ಮಾತುಗಳನ್ನು ಆಳವಾಗಿ ತೆಗೆದುಕೊಂಡ ಚೆನ್ನಿ ತಾನು ಮಾಡುತ್ತಿರುವ ಕಾರ್ಯ ಮತ್ತು ಇನ್ನೂ ತಾನು ಬದುಕಿರುವುದು ಎರಡೂ ಅಸಹ್ಯವೆಂದು ತಿಳಿದುಕೊಂಡಿರಬೇಕು ಹಾಗಾಗಿಯೇ ಆಕೆ ಕೊನೆಯ ತೀರ್ಮಾನಕ್ಕೆ ಬಂದಂತಿದೆ. ನಾನು ಬದುಕಿದ್ದರೆ ತಾನೆ ಇದೆಲ್ಲ. ನಾನೇ ಅಂತ್ಯವಾದರೆ ಇದೆಲ್ಲವೂ ನನ್ನ ಜೀವನದಿಂದ ಅಂತ್ಯ ಎಂದು ತಿಳಿದು ಕೊನೆಯ ನಿರ್ಧಾರಕ್ಕೆ ಬಂದಿದ್ದಾಳೆ. ಸಾವೇ ಎಲ್ಲದಕ್ಕೂ ಪರಿಹಾರವಲ್ಲ ಎನ್ನುವ ಅರಿವು ಆಕೆಗೆ ಹೊಳೆಯಲಿಲ್ಲ. ಆಕೆಯಲ್ಲಿ ಮೂಡಿದ್ದೇ ಪಾಪಪ್ರಜ್ಞೆ, ಅದರ ಫಲವೇ ಆತ್ಮಹತ್ಯೆಯ ಮಾರ್ಗ. ಬದುಕಿದ್ದರೂ ಸಮಾಜ ನನ್ನನ್ನು ನೋಡುವ ದೃಷ್ಟಿಯೇ ಬೇರೆಯಾಗಿರುತ್ತದೆ. ಕಾಯಿಲೆಯಿಂದ ಆಗ ಸತ್ತಿದ್ದರೆ ಒಳ್ಳೆಯದೇ ಆಗುತ್ತಿತ್ತು ಎನ್ನುವ ಅರಿವು ಆಕೆಗೆ ಈಗ ಬಂದಿರಬೇಕು, ಆದ್ದರಿಂದ ಇನ್ನೂ ಬದುಕಿದ್ದರೆ ಸತ್ತಂತೆ ಎನ್ನುವ ಅರಿವು ಆಕೆಗೆ ಬಂದಿದ್ದರಿಂದಲೇ ಸಾವೇ ಅಂತಿಮ ಉತ್ತರವೆಂದು ತೀರ್ಮಾನಿಸಿದ್ದಾಳೆ.

ಚೆನ್ನಿಯ ಸಾವು ನಿರೂಪಕರಲ್ಲಿ ಪಾಪಪ್ರಜ್ಞೆ ಕಾಡಿಸಿದೆ. ನಾನು ಆಕೆಗೆ ಹೇಳಿದ ಮಾತುಗಳೇ ಅವಳ ಸಾವಿಗೆ ಕಾರಣವಾಗಿದೆ. ನಾನು ಆಕೆಗೆ ಆ ರೀತಿಯಲ್ಲಿ ಹೇಳಬಾರದಿತ್ತು, ಅದಕ್ಕಿಂತಲೂ ಮುಂದೆ ಹೋಗಿ ಆಕೆಯ ಮನಃಪರಿವರ್ತನೆ ಮಾಡಲು ನನಗೆ ಇದ್ದ ಹಕ್ಕಾದರೂ ಏನು? ಎಂದು ಆಲೋಚಿಸುವಾಗ ಅವರ ಕರ್ತವ್ಯ ಮಾಡಿದ್ದಾರೆ ಎಂಬುದು ಓದುಗ ವರ್ಗದ ಸಾಮಾನ್ಯ ತಿಳುವಳಿಕೆ. ಆದರೆ ಅದೇ

ವಿಚಾರ ಪಾಪಪ್ರಜ್ಞೆಯಾಗಿ ಕಾಡಿದೆ. ನನ್ನಿಂದಲೇ ಆಕೆಯ ಸಾವು, ಸಾವಿಗೆ ನಾನೇ ಕಾರಣ, ಆಕೆಯೊಂದಿಗೆ ಸಹಕರಿಸದಿದ್ದರೂ ಬುದ್ಧಿ ಹೇಳುವ ಕಾರ್ಯದಿಂದಲೇ ಒಂದು ಜೀವದ ಹಾನಿಗೆ ಕಾರಣನಾಗಿದ್ದೇನೆಂಬ ನೋವು. ಈ ರೀತಿಯಲ್ಲಿ ಬದುಕುವುದಕ್ಕಿಂತ ಸಾಯುವುದು ಮೇಲು ಎಂದು ಎಲ್ಲಿಯೂ ಹೇಳಿಲ್ಲ, ಆದರೆ ಚೆನ್ನಿ ಅರ್ಥೈಸಿಕೊಂಡಿದ್ದಾಳೆ.

ದೇವರ ಹರಕೆಯನ್ನು ಸೇವೆಯೆಂದು ತಿಳಿಯುವ ಚೆನ್ನಿಗೂ ಆ ಸೇವೆಯನ್ನು ಪಾಪವೆಂದು ತಿಳಿಸುವ ನಿರೂಪಕರಿಗೂ ಯಾವುದೇ ಬಂಧುತ್ವದ ಸಂಬಂಧವಿರದಿದ್ದರೂ ಅದಕ್ಕಿಂತ ಮಿಗಿಲಾದ ಸಾಮಾಜಿಕ ಸಂಬಂಧವನ್ನು ಕಾಣಬಹುದು. ಲೇಖಕ ಅಥವಾ ನಿರೂಪಕರ ಕಾರ್ಯ ಕೇವಲ ಬರೆಯುವುದಾಗಲಿ, ಕಥೆ ಹೇಳುವುದಷ್ಟೇ ಮುಖ್ಯವಲ್ಲ. ಈ ಸಮಾಜದ ಮೌಢ್ಯವನ್ನು ತಿದ್ದಬೇಕಿದೆ. ಆ ಕಾರ್ಯವನ್ನೇ ನಿರೂಪಕರು ಮಾಡಿದ್ದಾರೆ. ಲೇಖಕರು ಹೇಳಿಕೊಳ್ಳಬಹುದು ನಾನು ಹೇಳಬಾರದಿತ್ತೆಂದು. ಆದರೆ ಓದುಗರಾದ ನಾವು ಹೇಳಲೇ ಬೇಕು ಲೇಖಕರ ನಿಲುವು ಸರಿಯೆಂದು. ಲೇಖಕರಲ್ಲಿ ಪುರುಷ ಸಹಜ ಲೈಂಗಿಕ ಬಯಕೆ ಈಡೇರಿಸಿಕೊಳ್ಳಬಹುದಾಗಿದ್ದರೂ ನಿಜವಾದ ವೈಚಾರಿಕ ಚಿಂತನಕಾರರ, ಸಾಮಾಜಿಕ ಬದ್ದತೆಯುಳ್ಳವರ, ಪ್ರಗತಿಪರರ ಸೈದ್ಧಾಂತಿಕ ನಿಲುವು ಲೇಖಕರಲ್ಲಿ ಬಂದಿರುವುದು ಒಳ್ಳೆಯ ಬೆಳವಣಿಗೆಯನ್ನು ಸೂಚಿಸುತ್ತದೆ. ಚೆನ್ನಿಯ ಮನದಲ್ಲಿ ಈ ಗಂಡಸಿನ ಬಗ್ಗೆ ಕಸಿವಿಸಿಯಾಗಿರಬಹುದು. "ನನ್ನ ದೇಹವನ್ನು ದೇವರಿಗೆ ಅರ್ಪಿಸುತ್ತಿದ್ದೇನೆ, ನೀವೇ ನನ್ನ ಬಾಳಿನ ದೇವರು" ಎಂದಾಗ, "ಬೇರೆಯವರಿಗೆ ಅರ್ಪಿಸಿದ ಎಂಜಲನ್ನು ಇನ್ನೊಂದು ದೇವರಿಗೆ ಅರ್ಪಿಸಬಹುದೇ" ಎನ್ನುವಾಗ ಅಸಹ್ಯತೆ ಎಂದು ಮನಗಾಣ ಬೇಕಿಲ್ಲ. ಇಲ್ಲಿ ನಿರೂಪಕರು ಆಕೆಯ ಹರಕೆಯ ಕ್ರಿಯೆಯನ್ನು ತಪ್ಪಿಸುವ ಜಾಣ್ಮೆ ಪ್ರಮುಖವಾಗಿದೆ.

ಹೀಗೆ ಪಾಪಪ್ರಜ್ಞೆಯ ವಿಷಯವು ಈ ಕಥೆಯಲ್ಲಿ ಪಾತ್ರಧಾರಿಗೂ ಮತ್ತು ನಿರೂಪಕರಿಬ್ಬರಿಗೂ ಬೇರೆ ಬೇರೆಯಾಗಿ ಕಾಡಿದೆ. ಹರಕೆಯ ಹೆಸರಿನ ಈ ಜೀವನ ಅಸಹ್ಯವೆಂದು ತಿಳಿದು ಬದುಕಬಾರದೆಂದು ನಿರ್ಧರಿಸುವ ಒಂದು ಹೆಣ್ಣಿನ ಪಾತ್ರಕ್ಕೂ, ಆ ರೀತಿಯಲ್ಲಿ ಧರ್ಮದ ಹೆಸರಿನಲ್ಲಿ ಬದುಕುತ್ತಿರುವ ಜೀವನ ಜೀವನವೇ ಅಲ್ಲವೆಂದು ತಿಳಿ ಹೇಳುವ ನಿರೂಪಕರ ಪಾತ್ರಗಳೆರಡಲ್ಲೂ ಸಣ್ಣ ಕಥೆಗಳು ಸಾಗುವ ಸೂಕ್ಷ್ಮವಾದ ಒಂದು ಬಗೆಯ ತಂತ್ರವನ್ನು ನೀಡುತ್ತದೆ. ಈ ಕಥೆ ಕನ್ನಡ ಸಾಹಿತ್ಯದ ಸಣ್ಣಕಥೆಗಳ ಪರಂಪರೆಯಲ್ಲಿ ಅಚ್ಚಳಿಯದೆ ನಿಲ್ಲುತ್ತದೆ.

**ಆಕರ ಗ್ರಂಥ**


- ಆನಂದ (ಅಜ್ಜಂಪುರ ಸೀತಾರಾಮ). (1943). *ನಾನು ಕೊಂದ ಹುಡುಗಿ (ಕಥಾ ಸಂಕಲನ: ಮಾಟಗಾತಿ ಮತ್ತು ಇತರ ಕಥೆಗಳು).* ಕರ್ನಾಟಕ ಸಂಘ. ಪು. 18–45


**ಪರಾಮರ್ಶನ ಗ್ರಂಥ**


- ಅಶೋಕ, ಟಿ.ಪಿ. (2012). *ಸಾಹಿತ್ಯ ಸಂಚಾರ.* ಅಕ್ಷರ ಪ್ರಕಾಶನ.